ಕರ್ನಾಟಕದ ಅಪರೂಪದ ಜಾನಪದ ತಜ್ಞರು. ಕರ್ನಾಟಕದ ಎಲ್ಲಾ ದೀರ್ಘ ಕಾವ್ಯಗಳನ್ನು, ಮಹಾಕಾವ್ಯಗಳನ್ನು ಮೊದಲಿಗೆ ಪರಿಚಯ ಮಾಡಿದವರೆ ಜೀಶಂಪ ಅವರು. ಆದ್ರ ಏನ್ ದುರ್ದೈವನೊ ಅವರ ಹೆಸರು ಮೈಸೂರದವರೇ ಹೇಳಲ್ಲ. ಎ.ಕೆ. ರಾಮಾನುಜನ್ ಜಾನಪದ ಕುರಿತು ಒಂದೇನ್ ಎರಡು ಪುಸ್ತಕ ಬರದಾರ. ಅವರನ್ನ ಹೊತ್ಕೊಂಡು ಮೆರೀತಾರಿವರು. ಒಂದು ವರ್ಕ್‌ಶಾಪ್ ಇತ್ತು. ಅಲ್ಲಿ ಅಲೆನ್ ಡಂಡೆಸ್ ಮತ್ತು ಎ.ಕೆ. ರಾಮಾನುಜನ್ ಪಾಠ ಮಾಡಲಿಕ್ಕೆ ಬಂದಿದ್ರು. ಅವರೆಲ್ಲರ ಪಾಠ ಕೇಳಿ ಕೇಳಿ ಏನನ್ನಿಸ್ತು ಅಂತಂದ್ರ ಇವರೆಲ್ಲರಗಿಂತ ನಾವು ಛಲೋ ಕೆಲಸ ಮಾಡೀವಿ ಅಂತ. ಅದೇ ಧೈರ್ಯದಿಂದ ಮುಂದುವರದೀವಿ. ಆ ವರ್ಕ್‌ಶಾಪ್‌ನಿಂದ ಏನ್ ಅನುಕೂಲ ಆಯ್ತಂದ್ರ ಯಾರು ಇಂಟರ್‌ನ್ಯಾಶನಲ್ ಸ್ಕಾಲರ್ ಅಂತ ಹೇಳ್ಕೋತಾರ ಅವ್ರ ಶಕ್ತಿ ಏನು ಅನ್ನೋದು ನಮಗ ಗೊತ್ತಾಯ್ತು. ಮತ್ತ ಇಲ್ಲಿನ ಹಿರಿಯ ವಿದ್ವಾಂಸರ ಶಕ್ತಿ ಏನು ಅನ್ನೋದು ಗೊತ್ತಾಯ್ತು. ನಾನು ಯಾವ ದಾರಿಯಲ್ಲಿ ಸಾಗಬೇಕು ಅನ್ನೋದು ಗೊತ್ತಾಯ್ತು. ಹಿಂಗಾಗಿ ಹೊಸಬರು ಭ್ರಮೆ ಬೆಳಿಸಿಕೊಳ್ಳಲಾರದೆ ಕೆಲಸ ಮಾಡಬೇಕು. ಹಳ್ಳಿಯಿಂದ ಬಂದಿರ್ತಾರಲ್ಲ ಅವ್ರು ಕೀಳರಿಮೆ ಇಲ್ಲದೆ ಶ್ರಮ ಪಡಬೇಕು. ತಮ್ಮದೇ ಹೊಸ ಮಾತು ಹೇಳಲಿಕ್ಕೆ ಹಿಂಜರಿಯಬಾರದು. ಈಗ ಸಮಸ್ಯೆ ಏನು ಅಂತಂದ್ರ ಜಾನಪದದ ಬಗ್ಗೆ ಮೊದಲಿನಂಗ ಒಳ್ಳೆಯ ಕಾರ್ಯಾಗಾರಗಳು, ಸೆಮಿನಾರ್‌ಗಳು ನಡೀತಿಲ್ಲ. ಕು.ಶಿ. ಹರಿದಾಸಭಟ್ಟರು ನಮಗೆಲ್ಲ ಹೊಸ ಪ್ರಯೋಗಗಳಿಗೆ ಹಚ್ಚಿದ್ರು. ಉಡುಪಿ ಕಾರ್ಯಾಗಾರದಲ್ಲಿ ನಾವು ಹದಿನೆಂಟು ಜನ ತಯ್ಯಾರಾದ್ವಿ. ಜಾನಪದ ಅಕಾಡೆಮಿ ಶುರುವಾಯ್ತು. ಆಮೇಲೆ, ಜಾನಪದ ವಿಶ್ವವಿದ್ಯಾಲಯ ಶುರುವಾಯ್ತು. ಇದರ ಹಿಂದೆ ಇದ್ದವರೆಲ್ಲ ಹಿರಿಯರೆ. ಹೊಸಬರು ದೊಡ್ಡ ಸಾಂಘಿಕ ಕೆಲಸ ಮಾಡ್ತಾ ಇಲ್ಲ. ನಮ್ಮ ವಯಸ್ಸಿನವರ ಅನಂತರದಲ್ಲಿ ಅಷ್ಟು ಹೊಸ ಪ್ರಯತ್ನಗಳು ಹೊಸಬರಲ್ಲಿ ಕಾಣ್ತಾ ಇಲ್ಲ. ಈಗ ವಿಶ್ವವಿದ್ಯಾಲಯಗಳಲ್ಲೂ ಅಷ್ಟು ಉತ್ಸಾಹ ಕಾಣ್ತಿಲ್ಲ. ಅಲ್ಲದೆ ಇನ್ನೊಂದು ಕಾರಣವಿದೆ ಅಂತ ಅನ್ನಿಸ್ತದ. ಈಗ ನವ್ಯದಲ್ಲಿ ಹೆಂಗ ಇಂಗ್ಲಿಷ್ ಸಿದ್ಧಾಂತ ಓದ್ಕೊಂಡು ಹೇಳಿ ಹೇಳಿ ದೊಡ್ಡವರನ್ನಿಸಿಕೊಂಡ್ರಲ್ಲ. ಅವರ ಕೊಡುಗೆ ಏನು ಅನ್ನೋದು ಯಾರಿಗೂ ಗೊತ್ತಿಲ್ಲ. ಹಂಗೇನೆ ಈಗ ಜಾನಪದದಾಗ ಏನಾಯ್ತು ಅಂತಂದ್ರ ಇಂಗ್ಲಿಷ್ ಸಿದ್ಧಾಂತ ಓದ್ಕೊಳ್ಳೋದು ಕನ್ನಡದಾಗ ಹೇಳೋದು. ಇಲ್ಲಿನ ವಾಸ್ತವಗಳೇ ಗೊತ್ತಿಲ್ಲ. ಇಲ್ಲಿನ ಜಾನಪದ ವೈವಿಧ್ಯ, ಸಂಕೀರ್ಣತೆ, ವಿಭಿನ್ನ ಲೋಕಗಳ ಬಗ್ಗೆ ಫಸ್ಟ್ ಹ್ಯಾಂಡ್ ಮಾಹಿತಿ ಇಲ್ಲ. ಹಿಂಗಾಗಿ ಬರ್ತಾ ಬರ್ತಾ ಜಾನಪದ ಅಧ್ಯಯನ ಒಂಥರಾ ಒಣ ಅಹಂಕಾರ ಆಗಿಬಿಡ್ತು. ಹಳ್ಳಿಹಳ್ಳಿಗಿ ಹೋಗಿ ಸಂಗ್ರಹ ಮಾಡಿ, ಅಧ್ಯಯನ ಮಾಡಿ ಬರ್ದವರನ್ನ ಲೇವಡಿ ಮಾಡಿದ್ರು. ಅವರೇನು ಬರೀ ಸಂಗ್ರಹಕಾರರು ಅಂತಂದ್ರು. ಎಲ್ಲೂ ಹೋಗಲಾರದೇನೆ ಉದ್ರಿ ಭಾಷಣ ಹೊಡೀವವರು ದೊಡ್ಡ ವಿದ್ವಾಂಸರ ಅನ್ನಿಸಿಕೊಂಡ್ರು. ಪಾಪ ಆ ಟಿ.ಎಸ್. ರಾಜಪ್ಪ, ಕ್ಯಾತನಳ್ಳಿ ರಾಮಣ್ಣ ಬರೀ ಸಂಗ್ರಹಕಾರರು ಅನಿಸಿಕೊಂಡ್ರು. ಒಮ್ಮೆನೂ ಅಪ್ಪತಪ್ಪಿ ಹಳ್ಳಿಗಿ ಹೋಗಿ ಒಂದೇ ಒಂದು ಹಾಡು ಸಂಗ್ರಹ ಮಾಡಲಾರದೆ ಭಾಷಣ ಮಾಡವ್ರು ವಿದ್ವಾಂಸರು ಅನಿಸಿಕೊಂಡ್ರು. ಇಂಥ ಪರಿಸ್ಥಿತಿನೆ ಜಾನಪದ ಅಧ್ಯಯನವನ್ನು ಕುಬ್ಜಗೊಳಿಸ್ತು. ಆವಾಗ ಸಂಗ್ರಹಕಾರರಿಗೆ ನಿರುತ್ಸಾಹ ಉಂಟಾಯಿತು. ಸಂಗ್ರಹ ಮತ್ತು ಅಧ್ಯಯನ ಒಟ್ಟಿಗೆ ತೆಗೆದುಕೊಂಡು ಹೋಗುವವರು ಕೂಡ ಈಗ ಕಡಿಮೆ ಆಗಿದ್ದಾರೆ. ಕ್ಷೇತ್ರಕಾರ್ಯ ಮಾಡದೇ ಇದ್ರ ನಿಮಗ ಜಾನಪದದ ತಳಬುಡನೇ ಗೊತ್ತಾಗಗಿಂಲ್ಲ. ವಿಶ್ವವಿದ್ಯಾಲಯಗಳಲ್ಲೂ ಮೊದಲಿನ ವಾತಾವರಣ ಉಳಿದಿಲ್ಲ. ಜಾನಪದ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಉದ್ಯೋಗಕ್ಕೂ ಕಷ್ಟ ಎದುರಾಯಿತು. ಹೊಸಬರಿಗೆ ಮಾರ್ಗದರ್ಶನ ಮಾಡುವ ಸಮರ್ಥ ಜಾನಪದ ವಿದ್ವಾಂಸರ ತಂಡವೂ ಈಗ ಮೊದಲಿನಂತಿಲ್ಲ. ನಮ್ಮ ಹಿಂದ ಹೆಂಡಿ, ಲಠ್ಠೆ, ಕಲ್ಬುರ್ಗಿ, ಜೀಶಂಪ, ಗೊರುಚ, ಕು.ಶಿ. ಹರಿದಾಸಭಟ್ಟರು ಇದ್ರು. ಹೊಸಬರಿಗಿ ಈಗ ಯಾರಿದ್ದಾರ? ಅಲ್ಲದೆ ಹೊಸಬರು ಈಗ ಯಾರ ಮಾತು ಕೇಳೊ ಸ್ಥಿತಿಯೊಳಗಿಲ್ಲ.